**ಸಾಕ್ಷಿಯನ್ನು ಪುನಃ ದಿಃ11.07.2018 ಕರೆಸಿ ಪ್ರಮಾಣ ಮಾಡಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಎನ್.ಎನ್ ವಕೀಲರಿಂದಃ**

ದಾವಾ ಆಸ್ತಿ ನನ್ನ ತಂದೆಗೆ ಮಂಜೂರಾದ ಬಗ್ಗೆ ಮಂಜೂರಾತಿ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ದಾವಾ ಆಸ್ತಿ ನನ್ನ ತಂದೆ ಹೆಸರಿಗೆ ಖಾತೆ ಇರುವ ಬಗ್ಗೆ 5 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 6 ಎಂದು, ನಮ್ಮ ತಂದೆಗೆ ಸಂಬಂಧಪಟ್ಟಂತೆ ಕ್ರಯಪತ್ರದ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಅದರ ಮೂಲ ಪತ್ರ ವಕೀಲರ ಬಳಿ ಇರುತ್ತದೆ. ಕೋಲಾರ ಉಪ ವಿಭಾಗಾಧಿಕಾರಿಯವರ ಪ್ರಕರಣ ಸಂಖ್ಯೆ:ಎಲ್‌ಎನ್‌ಡಿಎಸ್‌ಎಸ್‌ಸಿ ಬಿ/ಪಿ/ಟಿಃ5/2010-11ರ ಆದೇಶದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು, ದಾವಾ ಆಸ್ತಿಯ ಬಗ್ಗೆ ಇಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು, ದಾವಾ ಆಸ್ತಿಗೆ ಕಂದಾಯ ಕಟ್ಟಿದ ಬಗ್ಗೆ 4 ಕಂದಾಯ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-9 ರಿಂದ 12 ಎಂದು, ದಾವಾ ಆಸ್ತಿಯನ್ನು ನನ್ನ ತಂದೆ ಪಿಎಲ್‌ಡಿ ಬ್ಯಾಂಕಿಗೆ ಆಧಾರವಾಗಿಟ್ಟ ಬಗ್ಗೆ ಆಧಾರ ಪತ್ರದ ಅಸಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-13 ಎಂದು, ಪಿಎಲ್‌ಡಿ ಬ್ಯಾಂಕಿನಲ್ಲಿ ನಾನು ನಗದು ಹಣ 830 ರೂ ಕಟ್ಟಿದ ಬಗ್ಗೆ ಒಂದು ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-14 ಎಂದು, ಸದರಿ ಬ್ಯಾಂಕಿನಲ್ಲಿ ನಾನು ಸಾಲ ತೀರಿಸಿದ ಸಾಲ ತೀರುವಳಿ ಸರ್ಟಿಫಿಕೇಟ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-15 ಎಂದು, ಸದರಿ ನನ್ನ ಸಾಲವು ಮನ್ನಾ ಆದ ಬಗ್ಗೆ ದೃಢೀಕರಣ ಪತ್ರವನ್ನು ವ್ಯವಸ್ಥಾಪಕರಿಂದ ಪಡೆದು ಹಾಜರುಪಡಿಸಿದ್ದು ಅದನ್ನು ನಿಪಿ-16 ಎಂದು, ದಾವಾ ಆಸ್ತಿಯ ಬಗ್ಗೆ ಮತ್ತೊಂದು ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-17 ಎಂದು ಗುರ್ತಿಸಲಾಯಿತು.

**ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ. ದಯಾನಂದ ಮೂರ್ತಿ)**
**ಪ್ರಭಾರ ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**